* ಹೊಸಗನ್ನಡ ಛಂದಸ್ಸು :

ಹೊಸಮಟ್ಟುಗಳು : ಹುಟ್ಟು ಮತ್ತು ಬೆಳವಣಿಗೆ :

ಕ್ರಿ. ಶ. ೭ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಹಳೆಗನ್ನಡ ಮತ್ತು ನಡುಗನ್ನಡದ ಸಾಹಿತ್ಯ ಕೃತಿಗಳಿಗೆ ವಿಹರವಾದ ಛಂದಸ್ಸುಗಳಲ್ಲಿ ಮುಖ್ಯವಾದವನ್ನು ಪರಿಚಯಸಿಕೊಂಡವು. ಛಂದಸ್ಸುನಿಂತ ನಿರಾಗುತ್ತದೆ ಎನ್ನುವ ಹೊತ್ತಿನಲ್ಲಿಯೆ ಕ್ರೈಸ್ತ ಪಾದ್ರಿಗಳ ಪ್ರಭಾವ ಇತರೆ ಕ್ಷೇತ್ರದಲ್ಲಿ ಪ್ರಭಾವಬೀರದಂತೆ ಇದರ ಮೇಲೂ ಆಯಿತು.

ಪಂಜೆಮಂಗೇಶ್ವರವರ ರಚನೆಗಳು ವಿಶೇಷ ಉಲ್ಲೇಖಕ್ಕೆ ಅರ್ಹವಾದವು. ಪಂಜೆಯವರಿಗೆ ಸಮಕಾಲೀನರಾಗಿ ಹಟ್ಟಿಯಂಗಡಿ ನಾರಯಣರಾಯರು ೧೮೯೮ರ ಸಮಾರಿನಿಂದ ಕವಿತೆಗಳನ್ನು ರಚಿಸುತ್ತಿದ್ದರು. ಅವರೆ ಇಂಗ್ಲೀಷ ಕವಿತೆಗಳ ಅನುವಾದಗಳ ಸಂಕಲನ 'ಆಂಗ್ಲ ಕವಿತಾವಳಿ' ಯಿಂದ ಹಾಗೂ ಕನ್ನಡ ಕವಿತೆಯ ಭವಿತವ್ಯ ಮತ್ತು ಆಂಗ್ಲಕವಿತಾವಳಿ ಎಂಬ ಲೇಖನಗಳಿಂದ ಹೊಸಗನ್ನಡದಲ್ಲಿ ಕವಿತೆ ಯಾದ ದಾರಿ ಹಿಡಿದಿತ್ತು ಎಂಬುದರ ನಿಚ್ಚಳ ಕುರುಹಗಳು ದೊರೆಯುತ್ತವೆ. ಷಟ್ಪದಿ ಚೌಪದಿಯಂತಹ ಹಳೆಯ ಛಂದಸ್ಸುಗಳನ್ನೇ ಅಲ್ಪಸಲ್ಪ ಬದಲಿಸಿ ಹೊಸರೂಪಗಳನ್ನು ಮುಖ್ಯವಾಗಿ ಇಂಗ್ಲೀಷ ಮಾದರಿಯ ಚೌಪದಿಗಳನ್ನು ರೂಪಿಸುವ ಪ್ರಯತ್ನಗಳ ಜೊತೆಗೆ ಹೊಸಛಂದೋರೂಪಗಳನ್ನು ಮೊದಲ ಸಲ ಹೂಡುವ ಪ್ರಯತ್ನಗಳು ನಡೆದವು.

ಹೀಗೆ ಮುಂತಾದವರು ಇದೇ ದಾರಿಯಲ್ಲಿ ಸಾಗುತ್ತಿದ್ದಾಗ ಪಂಜೆ ಮತ್ತು ಗೋವಿಂದಪೈಗಳು ಹೊಸ ಲಯಗಳ ಕಡೆಗೆ ಕಣ್ಣಾಡಿಸಿದರು. ಅನಂತರ ಬಿ.ಎಂ.ಶ್ರೀಯವರ ಇಂಗ್ಲೀಷ ಗೀತೆಗಳು ಸಂಕಲನದ ಅನುವಾದಿತ ಪದ್ಯಗಳ ಭಾಷೆ ಛಂದಸ್ಸುಗಳು ನವನವೀನವಾದವು. ಶ್ರೀಯವರು ತೋರಿದ ಮಾರ್ಗದಲ್ಲಿ ಡಿ.ವಿ.ಜಿ. ಮಾಸ್ತಿವೆಂಕಟೇಶ ಅಯ್ಯಂಗಾರ, ಕುವೆಂಪು, ಬೇಂದ್ರೆ, ಪು.ತಿ.ನ, ವಿ.ಸೀ. ಮುಂತಾದವರು ಹೆಚ್ಚು ಹೆಚ್ಚು ಪರಿಣತ ಪ್ರಯೋಗಳನ್ನು ನಡೆಸಿದ ಫಲವಾಗಿ ಹೊಸಕಾವ್ಯ ಪ್ರಸ್ಥಾನ ಸ್ಥಿರವಾಯಿತು. ಹಾಗೆಯೇ ಈ ಕಾಲದ ಕವಿಗಳ ಕೃತಿಯನ್ನು ಕಾವ್ಯದೃಷ್ಟಿ ಭಾಷೆಛಂದಸ್ಸುಗಳ ಯೋಜನೆಗಳ ಮೇಲೆ ಇಂಗ್ಲೀಷ ಸಾಹಿತ್ಯದ ಪ್ರಭಾವ ಬೀರಿತು. ೧೯೨೦-೩೦ ರಿಂದ ಇಂಗ್ಲೀಷ ಗೀತೆಗಳು ಪ್ರಕಟನಂತರ ಕನ್ನಡ ಕವಿತ್ವದ ಲಯ ಗತಿ ಛಂದೋರೀತಿಗಳು ಅನಂತಮುಖವಾಗಿ ಹಿಗ್ಗುವ ಸಾಧ್ಯತೆ ಹೆಚ್ಚಿತು.

ಪಾದಗಳ ಸಂಖ್ಯೆ ಮತ್ತು ಅವುಗಳ ಧೀರ್ಘತೆಯಲ್ಲಿ ಕವಿ ಸ್ವಾತಂತ್ರ್ಯವಹಿಸಲು ಪ್ರಾರಂಭವಾಯಿತು. ೩,೪,೫,೬ ಈ ಯಾವುದೇ ಸಂಖ್ಯೆಯ ಮಾತ್ರಾ ಲಯದಿಂದ ಕೂಡಿರಬಹುದು. ಈ ಲಯ ತನಿಯಾಗಿ ಇಲ್ಲವೆ ಒಂದರೊಡನೊಂದು ಬೆರೆತು ಬರಲು ಅಡ್ಡಿಯಲ್ಲ. ಇಷ್ಟು ಅಷ್ಟೆ ಇರಬೇಕು ಎಂಬ ನಿರ್ಬಂಧವಿಲ್ಲದ ಮಾತ್ರಗಳ ಲಯುವನ್ನುಳ್ಳ ಅನೇಕ ಕವನಗಳು ರಚನೆಯಾದವು. ಪಾದಗಳಲ್ಲಿ ವೈವಿದ್ಯಮಯತೆಯನ್ನು ಕಂಡುಕೊಳ್ಳುವ ಸಾಧ್ಯತೆ ಇಲ್ಲಿ ನಿಚ್ಚಳವಾಗಿ ಕಂಡುಬಂದಿತು. ಹೀಗೆ ಮಾಡಿದ ಅನೇಕ ಪ್ರಯೋಗಗಳಿಗೆ ಛಂದೋ ತತ್ವವನ್ನು ಅನ್ವಯಿಸಿ ಅದಕ್ಕೆ ಪರಿಭಾಷೆಯನ್ನು ಕಲ್ಪಿಸಬೇಕಾದ ಸಮಯ ಬಂದಾಗ ತೀ.ನಂ.ಶ್ರೀಯವರು ಕೆಲವು ಪಾರಿಭಾಷಕ ಶಬ್ದಗಳನ್ನು ಸೃಷ್ಟಿಸಿದರು. ಅವುಗಳಲ್ಲಿ ಗಣಪರಿವೃತ್ತಿ ಅನಾಗತ, ಮುಡಿ,

Scanned with CamScanner

ಪದ್ಮಗಣ, ಪ್ರಸ್ವೀಕರಣ, ಮೌನ, ವಿಷಮಗಣ ಮುಂತಾದ ಪರಿಭಾಷಕ ಪದಗಳು ಬಳಕೆಗೆ ಬಂದವು. ಇವುಗಳಲ್ಲದೆ, ಛಂದೋಬಂಧಗಳಾದ ಸರಳರಗಳೆ, ಸುನೀತ, ಮುಕ್ತ ಛಂದಸ್ಸು ಪ್ರಗಾಥ ಮಹಾಛಂದಸ್ಸು, ನವ್ಯಛಂದಸ್ಸು, ಬೃಹತ್ ಛಂದಸ್ಸು ಈ ರೀತಿಯಾಗಿ ರಚನೆಗಳಾದವು ಹೀಗೆ ಛಂದಸ್ಸು ತನ್ನ ವಿಸ್ತಾರವಾಪ್ತಿಯನ್ನು ವಿಸ್ತರಿಸಿಕೊಂಡಿತು.

೧. ಮಾತ್ರೆ :

'ಮಾತ್ರೆ' ಎಂದರೆ ಒಂದು ಹ್ರಸ್ವಾಕ್ಷರವನ್ನು ಉಚ್ಚರಿಸುವ ಸಮಯಕ್ಕೆ ಕೊಟ್ಟ ಮೌಲ್ಯ ಹ್ರಸ್ವಾಕ್ಷರವನ್ನು ಒಂದು ಮಾತ್ರೆಯೆಂದು, ದೀರ್ಘಾಕ್ಷರವನ್ನು ಎರಡುಮಾತ್ರೆ ಎಂದು, ಪ್ಲುತವನ್ನು ತ್ರಿಮಾತ್ರೆಯೆಂದು ಹೇಳಲಾಗಿದ್ದು.

೧. ಒಂದು ಅಕ್ಷರ ಲಘುವಾಗಿದ್ದರೂ ಸಂದರ್ಭವಂಶದಿಂದ ಅದನ್ನು ಎಳೆದು ಎರಡು ಮಾತ್ರೆಗಳ ಬೆಲೆ ಕೊಡಲಾಗುವುದು.

೨. **ಚರಣದ ಕೊನೆಯಲ್ಲಿ ಲಘುವಿಗೆ ಗುರುವಿನ ಬೆಲೆಯನ್ನು ಕೊಡುವುದು ಸಾಮಾನ್ಯ.** ಮಾತ್ರೆಗಳನ್ನು ಅವಲಂಬಿಸಿಯೆ ಪದ್ಯಗಳ ಸಾಲುಗಳನ್ನು ಹಲವು ಗಣಗಳಾಗಿ ವಿಂಗಡಿಸಲಾಗುತ್ತದೆ. ಅಂಥ ಗಣಗಳನ್ನು ಮಾತ್ರಾಗಣಗಳೆಂದು ಕರೆಯಲಾಗುತ್ತದೆ. ಸಂಸ್ಕೃತದಲ್ಲಿ ಮಾತ್ರೆಗಳನ್ನು ಉಪಯೋಗಿಸಿ ಮಾತ್ರಾಗಣಗಳ ವಿಭಜನೆಯನ್ನು ಮಾಡಿದ್ದರೂ ಅಲ್ಲಿ ಚತುರ್ಮಾತ್ರಾಗಣ ವಿಭಜನೆ ಮಾತ್ರ ಇದೆ. ಕನ್ನಡದಲ್ಲಿರುವಂತೆ ತ್ರಿಮಾತ್ರಾಗಣ, ಪಂಚಮಾತ್ರಗಣ, ಷಣ್ಮಾತ್ರಾಗಣಗಳು ಬಳಸದೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಏಳು, ಎಂಟು, ಒಂಬತ್ತು ಮಾತ್ರೆಗಳ ಗಣವಿಭಜನೆ ಮಾಡಿರುವುದು ಕಂಡುಬರುತ್ತದೆ. ಓದಿನಲ್ಲಿ ತೊಡರಿಕೊಳ್ಳದೆ ಕಿವಿಗೆ ಹಿತವೆನಿಸಿ ವಾಚನ, ಗಾಯನ, ಎರಡಕ್ಕೂ ಹೊಂದಿಕೊಂಡು ವೈವಿಧ್ಯತೆಯನ್ನು ಮೆರೆಯುತ್ತದೆ.

೨. ಗಣ ಪರಿವೃತ್ತಿ :

ಲಯದಲ್ಲಿ ಒಂದು ಹೊಸ ಬಳುಕನ್ನು ತರುವುದಕ್ಕಾಗಿ ಒಂದು ಜಾತಿಯ ಗಣಗಳ ಸ್ಥಾನದಲ್ಲಿ ಅದೇ ಮಾತ್ರಾ ಪರಿಮಿತಿಯ ಇನ್ನೊಂದು ಜಾತಿಯ ಗಣಗಳನ್ನು ಇರಿಸುವುದಕ್ಕೆ ಗಣಪರಿವೃತ್ತಿ ಎಂದು ಕರೆಯುತ್ತಾರೆ. ಗಣಪರಿವೃತ್ತಿ ಎಂಬ ಹೆಸರನ್ನು ತೀ.ನಂ.ಶ್ರೀಯವರು ಕೊಟ್ಟಿದ್ದಾರೆ.

ಉದಾ:

U U U   U U U   U U U   U U U

ನ ಲಿ ಯು   ತಿ ಹ ದು   ಉ ದ ಯ   ಗ ಗ ನ

U U U   -   U - U

ಅ ರು ಣ   ರಾ ಗ   ದಿಂ ದ

ಕೊಳದ ತಿಗಳು ಕುಣಿಯುತಿಹವು
ಗಾನ ದೊಲುಮೆ ಯಿಂದ

ಇದು ಉತ್ಸಾಹ ಲಯದ ಕವನ ಇಲ್ಲಿ ಮೂರನೆಯ ಪಾದದಲ್ಲಿ ವಿಭಜಿಸಿದ ಗಣಗಳನ್ನು ಪರಿಶೀಲಿಸಿದರೆ 'ತಿಗಳು' ಎಂಬ ಗಣಕ್ಕೆ ಅರ್ಥವಿರುವುದಿಲ್ಲ ಆದುದರಿಂದ ಇದನ್ನು

U U   U U U U   U U U   U U U

ಕೊ ಳ   ದ ಲೆ ಗ ಳು   ಕು ಣಿ ಯು   ತಿ ಹ ವು

ಎಂದು ೨:೪ ೩:೩: ಆಗಿ ವಿಭಜಿಸ ಬೇಕಾಗುತ್ತದೆ. ಒಟ್ಟು ಮಾತ್ರೆಗಳಲ್ಲಿ ವ್ಯತಾಸವೇನೂ ಕಾಣುವುದಿಲ್ಲ ಇಲ್ಲಿ ೩+೩ ಮೊದಲು '೬'ರ ಒಂದು ಘಟಕವಾಗಿ ಅನಂತರ ಆಂತರಿಕವಾಗಿ ೨+೪ ರಂತೆ ವಿಭಜನೆಗೊಳ್ಳುತ್ತದೆ. ಹೊಸಗನ್ನಡ ಕವಿತೆಗಳಲ್ಲಿ ಮುಖ್ಯವಾಗಿ ೩,೪ ಮತ್ತು ೫ ಮಾತ್ರೆಗಳ ಲಯದಲ್ಲಿ ಗಣ ಪರಿವೃತ್ತಿಯನ್ನು ಕಾಣಬಹುದು.

೩. ಮೌನ :

Scanned with CamScanner

೫. ಮುಡಿ :

ಚರಣದ ಕೊನೆಗೆ ನಿಂತು ಅದಕ್ಕೆ ಮುಡಿವು ಕೊಡುವ ಅಕ್ಷರಕ್ಕೆ "ಮುಡಿ" ಎಂಬ ಹೆಸರನ್ನು ತೀ.ನಂ.ಶ್ರೀಯವರು ಕೊಟ್ಟಿದ್ದಾರೆ. ಮುಡಿಯೂ ಷಟ್ಪದಿಯ ಮೂರು ಅಥವಾ ೬ನೇಯ ಚರಣದ ಕೊನೆಯಲ್ಲಿ ನಿಲ್ಲುವಂತೆ ಚರಣ ಕೊನೆಯಲ್ಲಿ ಬಿಡಿಯಾಗಿ ನಿಂತು ಮುಕ್ತಾವನ್ನು ಕೊಡುತ್ತದೆ. ಮಾತ್ರೆಯ ದೃಷ್ಟಿಯಿಂದ ಹೇಳುವದಾದರೆ "ಮುಡಿ" ಗೆ ಎಲ್ಲಾ ಕಡೆಯಲ್ಲಿ ಒಂದೇ ರೀತಿಯ ಬೆಲೆಯಿಲ್ಲ ಅದು ಯಾವ ಬಗೆಯ ಗಣದೊಂದಿಗೆ ಬರುತ್ತದೆ ಆ ಗಣದ ಬೆಲೆಯನ್ನೇ ಪಡೆಯುತ್ತದೆ.

ಉದಾ: ನಮ್ಮೂರು ಚಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳ ಕೇ ಎನ್ನರಸ
ಸುಮ್ಮನಿರಿ ಎಂದಳಾ ಕೆ

ಈ ಉದಾಹರಣೆಯಲ್ಲಿ "ಕೆ" ಐದು ಮಾತ್ರೆಗಳ ಬೆಲೆಯನ್ನು ಪಡೆಯುತ್ತದೆ ಹೀಗೆ ಮುಡಿ ಮೂರು ಮಾತ್ರೆಯ ಗಣದ ಸ್ಥಾನದಲ್ಲಿ ಬಂದಾಗ ಮೂರು ಮಾತ್ರೆಯ ಬೆಲೆಯನ್ನು ೪,೫,೬ ಮಾತ್ರೆಯ ಗಣದ ಸ್ಥಾನದಲ್ಲಿ ಬಂದಾಗ ೪,೫,೬ ಮಾತ್ರೆಗಳ ಬೆಲೆಯನ್ನು ಪಡೆಯುತ್ತದೆ. ಹೊಸಗನ್ನಡದಲ್ಲಿ ಇದನ್ನು ಗುರುತಿಸಿದವರು ಮೊತ್ತಮೊದಲು ತಿ.ನಂ.ಶ್ರೀಯವರು.

೬. ಪದ್ಮ ಗಣ :

UU - U - U U U

ನೆ ರೆ ಮು ಪ್ಪು ಯೌ ವ ನ ಕೆ

- U U U - U

ಒ ಲ್ಲ ದೊ ಡ ನಾ ಟ ಪ

- U U U - - U

ಯೌ ವ ನ ವು ಸು ಮ್ಮಾ ನ

- U U U - U

ಮು ಪ್ಪು ಮಿ ಡು ಕಾ ಟ ಪ

ಈ ಮೇಲಿನ ಉದಾಹರಣೆಯಲ್ಲಿ ೧ ಮತ್ತು ೩ನೆಯ ಪಾದಗಳ ಅಂತ್ಯದಲ್ಲಿ ೫ ಗಣಗಳಿವೆ. ೨ ಮತ್ತು ೪ ನೇಯ ಪಾದಗಳ ಕೊನೆಯಲ್ಲಿ ಮೂರು ಮಾತ್ರೆಯ ಗಣಗಳಿವೆ. ಇಲ್ಲಿ ೧ ಮತ್ತು ೩ ನೆಯ ಪಾದಗಳ ಕೊನೆಯಲ್ಲಿ ಮುಕ್ತಾಯ ಸೂಚನೆಗೆ ಅನುಕೂಲವಾಗಿದೆ. ಮುಂಡಿ ತರುವ ಮುಕ್ತಾಯಕ್ಕಿಂತ ಇದು ನಿಧಾನವಾಯಿತು. ಮಂಡಿಗಿಂತಲೂ ಅಕ್ಷರ ಪ್ರಮಾಣದಲ್ಲಿ ಉದ್ದವಾಗಿ ಮುಕ್ತಾಯದ ಭಾವನೆಯನ್ನು ಅದಕ್ಕಿಂತ ಸಾವಕಾಶವಾಗಿ ತರುವ UUU ಲಕ್ಷಣದ ವಿಶೇಷ ಗಣಕ್ಕೆ "ಪದ್ಮಗಣ" ಎಂಬ ಹೆಸರನ್ನು ತೀ.ನಂ.ಶ್ರೀ.ಯವರು ಕೊಟ್ಟಿದ್ದಾರೆ. ಇಲ್ಲಿಯ ಅಂತ್ಯಗಣ UU-U ಎಂದಾಗಲಿ, --U ಎಂದಾಗಲಿ ಇರಬೇಕು UUUU ಎಂಬಂತೆ ಅಥವಾ -UU ಎಂಬಂತೆ ಇರುವುದು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಪಾದದಲ್ಲಿರುವ ಉಳಿದ ಗಣಗಳ ಬೆಲೆಗೆ ಅನುಗುಣವಾಗಿ ಇದರ ಬೆಲೆಯು ನಿರ್ಧರಿತವಾಗುತ್ತದೆ. ಪ್ರಸ್ತಾರವಾದಲ್ಲಿ ಇದಕ್ಕೆ "ಪ" ಎಂಬ ಅಕ್ಷರವನ್ನು ಬಳಸಬಹುದಾಗಿದೆ. ಮುಡಿಯಂತವೇ ಪದ್ಮಗಣದ ಮೂಲವನ್ನು ಕೂಡಾ ತೀ.ನಂ.ಶ್ರೀ ಯವರು ಅಂಶಲಯದಲ್ಲಿಯೇ ಗುರುತಿಸುತ್ತಾರೆ. ಸಾಹಿತ್ಯದಲ್ಲಿ ಬ್ರಹ್ಮಗಣವೇ ಪದ್ಮಗಣವಾಗಿ ಪರಿವರ್ತನೆಯಾಗುತ್ತದೆ.

Scanned with CamScanner

* ಹೊಸಗನ್ನಡ ಛಂದೋರೂಪಗಳು :

೧. ಸರಳ ರಗಳೆ :

ಪ್ರಾಸವಿಲ್ಲದ ರಗಳೆಗೆ ಸರಳರಗಳೆ ಎಂದು ಕರೆಯುತ್ತಾರೆ. ರಗಳೆ ಮೂಲತ ಕನ್ನಡಕ್ಕೆ ಸಂಬಂಧಿಸಿದ್ದು ಆದರೆ ಆದಿ, ಅಂತ್ಯ ಪ್ರಾಸಗಳನ್ನು ತೊರೆದರೆ ಅದನ್ನು ಸರಳ ರಗಳೆ ಎನಿಸಿಕೊಳ್ಳುತ್ತದೆ. ಇಂಗ್ಲಿಷನ "ಬ್ಲ್ಯಾಂಕ್ ವರ್ಸ್"ನ ಪ್ರಭಾವದಿಂದ ಕನ್ನಡದಲ್ಲಿ ಸರಳರಗಳೆ ಬಂದಿದೆ ಸರಳರಗಳೆಯಲ್ಲಿ ಪ್ರತಿಚರಣದಲ್ಲೂ ೫ ಮಾತ್ರೆಗಳುಳ್ಳ ೪ ಗಣಗಳು ಬರುತ್ತವೆ. ಇಂಗ್ಲಿಷಿನ ಬ್ಲ್ಯಾಂಕವರ್ಸಿನ ಅನುಕರಣೆಯಲ್ಲದೆ ಈ ಸರಳರಗಳೆ ಲಲಿತರಗಳೆಯ ಆಧಾರ ಮೇಲೆ ನೆಲೆನಿಂತ ಛಂದೋಬಂಧ. ಇದನ್ನು ಇಂಗ್ಲಿಷಿನ ಬ್ಲ್ಯಾಂಕವರ್ಸ್‌ನಂತೆ ನಾಟಕಗಳನ್ನು ಕಥಾಕಾವ್ಯಗಳನ್ನು ಬರೆಯುವುದಕ್ಕೆ ಇದನ್ನು ಉಪಯೋಗಿಸಲಾಗುತ್ತದೆ. ಆಧುನಿಕ ಕವಿಗಳು ಲಲಿತ ರಗಳೆಯ ಆದಿ ಅಂತ್ಯಪ್ರಾಸಗಳನ್ನು ತೆಗೆದು ಸರಳರಗಳೆಯ ರೂಪಕೊಟ್ಟರು ಇದು ಲಯವೈವಿಧ್ಯ ವಿನ್ಯಾಸಕ್ಕೆ ಅನೂಕೂಲವಾಯಿತು. ಇಲ್ಲಿ ಗಣ ಹಾಗೂ ಲಯ ಇವುಗಳ ಕಟ್ಟನ್ನು ಮುರಿಯುವ ಪದ್ದತಿ ಕಂಡುಬರುತ್ತದೆ. ಮಾಸ್ತಿಯವರು ಈ ಛಂದಸ್ಸಿಗೆ ಮೊದಲ ಹರಿಕಾರರು. ಅವರ "ಸ್ಥಳಗಳ ಹೆಸರು" ಎಂಬ ಕವನ ಸರಳರಗಳೆಯಲ್ಲಿದೆ ಹಾಗೆ ನವರಾತ್ರಿ, ಮೂಕನ ಮಕ್ಕಳು, ರಾಮನವಮಿ, ಸರಳರಗಳೆಯಲ್ಲಿಯೆ ರಚನೆಗೊಂಡಿವೆ. ಬಿ.ಎಂ.ಶ್ರೀಯವರ ಅಶ್ವತ್ಥಾಮನ್, ಗೋವಿಂದ ಪೈಗಳ ಗೊಲ್ಗಾಥಾ (ನಾಟಕ) ಕುವೆಂಪು ಅವರ ಯಮನಸೋಲು, ಬಿರುಗಾಳಿ, ರಕ್ತಾಕ್ಷಿ, ಚಿತ್ರಾಂಗದಾ (ಕಾವ್ಯ) ಇವುಗಳಲ್ಲಿ ಸರಳರಗಳೆ ಬಳಕೆಯಾಗಿದೆ ಇಲ್ಲಿ ಅಂತ್ಯ ಪ್ರಾಸ ಕಂಡುಬರುತ್ತದೆ.

---

Scanned with CamScanner

೨. ಸಾನೆಟ್ (ಸುನೀತ) – (ಅಷ್ಟ ಷಟ್ಪದಿ) :

ಕನ್ನಡಕ್ಕೆ ಸಾನೆಟ್ ಇಂಗ್ಲಿಷ್ ಕಾವ್ಯದ ಅಭ್ಯಾಸದಿಂದ ಬಂದಿತು. ಬೇಂದ್ರೆ, ಮಾಸ್ತಿಯವರು ಸಾನೆಟ್ಟಿಗೆ 'ಅಷ್ಟಪಟ್ಟದಿ' ಎಂದು ಕರೆದರೆ ಗೋವಿಂದ ಪೈಗಳು 'ಚತುರ್ದಶಪದಿ' ಎಂದು ಕರೆಯುತ್ತಾರೆ. ಇನ್ನು ಕೆಲವರು ಸುನೀತವೆಂದೂ ಕರೆಯುತ್ತಾರೆ.

ಇದರ ಮುಖ್ಯ ಲಕ್ಷಣ ೧೪ ಪಂಕ್ತಿಗಳು ಇರುತ್ತವೆ. ಸಾನೆಟ್ಟನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ರೂಢಿ ಮೊದಲ (ಒಕ್ಟೆವ್) ಭಾಗ ೮ ಪಾದಗಳನ್ನು ಎರಡನೆಯ (ಸೆಸ್ಟೆಟ್) ಭಾಗ ೬ ಪಾದಗಳನ್ನು ಒಳಗೊಂಡಿರುತ್ತದೆ. ಮೊದಲನೆಯ ಭಾಗದಲ್ಲಿ ಸಂಗತಿಯನ್ನು, ಎರಡನೆಯ ಭಾಗದಲ್ಲಿ ಅದರಿಂದ ಮೂಡುವ ಭಾವವನ್ನು ವಿವರಿಸಬೇಕು. ಮೊದಲ ಎಂಟು ಸಾಲುಗಳಲ್ಲಿ ನಾಲ್ಕು ನಾಲ್ಕು ಸಾಲಿನ ಎರಡು ನುಡಿಗಳು ಇರಬಹುದು. ಹಾಗೂ ಇಲ್ಲಿ ಎರಡೇ ಪ್ರಾಸಗಳು ಇರಬೇಕು ಕೊನೆಯ ೬ ಸಾಲುಗಳಲ್ಲಿ ಎರಡು ನುಡಿಗಳು ಇರಬಹುದು. ಹಾಗೂ ಇಲ್ಲಿ ೨ ಅಥವಾ ೩ ಪ್ರಾಸಗಳು ಬರುತ್ತವೆ ಆದರೆ ಇದು ಹಿಂದಿನ ಎರಡು ಪ್ರಾಸಗಳಿಗೆ ಹೋಲಬಾರದು ಮೊದಲ ನಾಲ್ಕು ಸಾಲು ಕವಿಯ ವಿಚಾರವನ್ನೋ ಮನಃ ಸ್ಥಿತಿಯನ್ನೋ ಸೂಚಿಸುತ್ತದೆ.

ಕನ್ನಡದ ಪ್ರಮುಖ ಕವಿಗಳೆಲ್ಲರೂ ಸಾನೆಟ್‌ಗಳನ್ನು ಬರೆದಿದ್ದಾರೆ. ಕನ್ನಡದಲ್ಲಿ ಮೊತ್ತಮೊದಲಿಗೆ ಸಾನೆಟ್‌ನ್ನು ರಚಿಸಿದವರು ಗೋವಿಂದ ಪೈಗಳು, ಕುವೆಂಪು, ಮಾಸ್ತಿ, ಪು.ತಿ.ನ, ಬೇಂದ್ರೆ ಕೆ.ಎಸ್.ಎನ್, ವಿಕೃ, ಎಸ್.ವ್ಹಿ. ಪರಮೇಶ್ವರ ಭಟ್ಟ, ಶ್ರೀರಂಗ ಮೊದಲಾದವರು ಸಾನೆಟ್‌ಗಳನ್ನು ರಚಿಸಿದ್ದಾರೆ.

ನವೋದಯ ಕಾಲದಲ್ಲಿ ಭಾವಗೀತೆಯ ಅಂಗವಾಗಿ ಕನ್ನಡದಲ್ಲಿ ಸಾನೆಟ್ ಪ್ರಯೋಗಗಳನ್ನು ಬೇಂದ್ರೆಯವರು ತಮ್ಮ ಸಾನೆಟ್‌ಗಳಲ್ಲಿ ಪ್ರಾಸ ರಹಿತ್ಯ ಪ್ರಯೋಗಗಳನ್ನು ಮಾಡಿದರೆ, ಪುತಿನವರು ಮೊದಲ ಮೂರು ಚೌಪದಿಗಳಲ್ಲಿ ಆದಿಪ್ರಾಸವನ್ನು ಬಳಸಿದ್ದು, ಕಣವಿಯವರು ಪ್ರಾಸ ತ್ಯಜಿಸಿ ಸುನೀತ ಪದ್ಯಗಳನ್ನು ರಚಿಸಿರುವುದು ಕಂಡುಬರುತ್ತದೆ. ಇಟಲಿ ಸಾನೆಟ್ ಛಂದಸ್ಸಿನ ತವರು ನೆಲೆ ಡಾಂಟೆಕವಿ ಮೊತ್ತಮೊದಲು ಇದರಲ್ಲಿ ಕವಿತೆ ರಚಿಸಿದನು. ೧೯೧೬ರಲ್ಲಿ ಎಲೆಲೆದುರುಳ ನಿಷಾದ (ಕವಿತಾವತಾರ) ಎಂಬ ಒಂದು ಸಾನೆಟ್ 'ಕನ್ನಡ ಕೊಗಿಲೆ' ಎಂಬ ಪತ್ರಿಕೆಯಲ್ಲಿ ಅಚ್ಚಾಯಿತು.

೩. ಪ್ರಗಾಥ :

ಇಂಗ್ಲೀಷ "The ode" ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ "ಪ್ರಗಾಥ" ಎಂಬ ಪದವನ್ನು ಬಳಸುತ್ತೇವೆ. ಪ್ರಗಾಥ ಭಾವಗೀತೆಯ ಒಂದು ರೂಪ 'ಓಡ್" ಪದವು ಗ್ರೀಕ್ ಪದವಾಗಿದೆ. ಓಡ್ ಎನ್ನುವುದು ಸಾಮಾನ್ಯವಾಗಿ ಪ್ರಾಸವುಳ್ಳ ಗೀತೆ ಗಂಭೀರವಾದ ಮತ್ತು ಘನವಾದ ಶೈಲಿಯಲ್ಲಿರುತ್ತದೆ. ಬದಲಾಯಿಸುವ ಅನಿಯತ ಛಂದಸ್ಸಿನಲ್ಲಿರುತ್ತದೆ. ಸಾಮಾನ್ಯವಾಗಿ ೫೦ ರಿಂದ ೨೦೦ ಸಾಲುಗಳಷ್ಟಿರುತ್ತದೆ. ಇದು ಸಂಭೋದನೆಯ ರೂಪದಲ್ಲಿರುತ್ತದೆ.

ಕನ್ನಡದಲ್ಲಿ ಈ 'ಓಡ್' ತಂದು ಅದಕ್ಕೆ ಪ್ರಗಾಥ ಎಂಬ ಹೆಸರನ್ನಿಟ್ಟವರು ಆಚಾರ್ಯ ಬಿ.ಎಂ.ಶ್ರೀಯವರು, ಡಿ.ವಿ.ಜಿ.ಯವರು ಬರೆದಿರುವ ಪ್ರಗಾಥಗಳಲ್ಲಿ "ಬೇಲೂರಿನ ಶಿಲಾಬಾಲಿಕೆಯರು" ಮೊತ್ತಮೊದಲ ಪ್ರಗಾಥ ಇದನ್ನು ನಿಯತ ಪ್ರಗಾಥ ಎಂದು ಕರೆಯಬಹುದು. ಕುವೆಂಪು ಅವರು 'ಗೊಮ್ಮಟೇಶ್ವರ' ಎಂಬ ಪ್ರಗಾಥವನ್ನು ಆದಿಪ್ರಾಸವನ್ನು ತೊರೆದು ಬರೆದರು. ಬೇಂದ್ರೆಯವರ "ಓಹಾಡೇ" ಎಂಬ ಪ್ರಗಾಥದಲ್ಲಿ ಆದಿ ಹಾಗೂ ಅಂತ್ಯ ಪ್ರಾಸಗಳು ಕಂಡುಬರುತ್ತದೆ. ಶ್ರೀಯವರ ಪ್ರಗಾಥಗಳಲ್ಲಿ ಎಲ್ಲದರಲ್ಲಿಯೂ ನಿಯತವಾಗಿ ಪ್ರಾಸ ಬಳಕೆಯೂಗಿಲ್ಲ. ಆದರೆ ಒಳಪ್ರಾಸ, ಅಂತ್ಯಪ್ರಾಸ, ಅನುಪ್ರಾಸ, ಇವುಗಳ ಚತುರ ಬಳಕೆ ಇಲ್ಲಿ ಸೊಗಯಿಸಿದೆ ಕನ್ನಡದಲ್ಲಿ ಕೇವಲ ಕೆಲವೇ ಪ್ರಗಾಥಗಳು ಬಂದಿವೆ. ಭಾವಗೀತೆಯ ಒಂದು ರೂಪವಾದ ಪ್ರಗಾಥವು ಇನ್ನು ಬೆಳೆಯಬೇಕಾಗಿದೆ.

ಸ್ವಚ್ಛಂದ ಛಂದಸ್ಸು (ಮುಕ್ತ ಛಂದಸ್ಸು) :

ಇಂಗ್ಲಿಷಿನ "ಫ್ರಿವರ್ಸ" ಎಂಬ ಶಬ್ದವೇ ಕನ್ನಡದಲ್ಲಿ ಸ್ವಚ್ಛಂದ ಛಂದಸ್ಸು, ಇದನ್ನು ಮುಕ್ತ ಛಂದಸ್ಸು ಎಂತಲು ಕರೆಯುತ್ತಾರೆ. ಇದು ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬಳಕೆಗೆ ಬಂದ ಬಿಂದು ವಿಶಿಷ್ಟ ಛಂದೋರೂಪ ಈ ಪ್ರಕಾರಗಳಲ್ಲಿ ವಿ.ಕೃ.ಗೋಕಾಕರು ಮೊದಲು ಕಾವ್ಯರಚಿಸಿದವರು. ಅವರ "ಸಮುದ್ರಗೀತೆಗಳು" ಸಂಕಲನದ 'ಪ್ರತಿಜ್ಞೆ' ಎಂಬ ಕವನ ಸ್ವಚ್ಛಂದ ಛಂದಸ್ಸಿನಲ್ಲಿ ರಚಿತವಾದ ನಾಂದಿ ಪದ್ಯವಾಗಿದೆ. ಈ ಛಂದಸ್ಸಿನ ವಿಶಿಷ್ಯತೆ ಎಂದರೆ ಅಗತ್ಯಕ್ಕೆ ತಕ್ಕಂತೆ ಪಾದಗಳು ಹಿಗ್ಗುತ್ತ–ಕುಗ್ಗುತ್ತ ಹೋಗುತ್ತವೆ. ಪದ್ಯದ ಪಾದಗಳು ಲಯಬದ್ಧತೆಯಿಂದ ಹಾಗೂ ವಿಸ್ತಾರವಾದ ವಸ್ತು ವಿಶಿಷ್ಟತೆಯಿಂದ ಮೆರಗು ಪಡಿದಿರುತ್ತದೆ. ವಿ.ಕೃ.ಗೋಕಾಕರ ನಂತರ ಗೋಪಾಲ ಕೃಷ್ಣ ಅಡಿಗ, ರಾಮಚಂದ್ರ ಶರ್ಮ, ಎ.ಕೆ.ರಾಮಾನುಜ, ಕೆ.ಎಸ್.ನರಸಿಂಹಸ್ವಾಮಿ, ಜಿ.ಎಸ.ಎಸ್.ಚನ್ನವೀರ ಕಣವಿ ಮುಂತಾದವರು ಮುಕ್ತ ಛಂದಸ್ಸಿನಲ್ಲಿ ಕವನಗಳನ್ನು ರಚಿಸಿದ್ದಾರೆ.